# ಓದುಗರ ಸ್ಪಂದನ

## ಮಕ್ಕಳ ಜೀವನವನ್ನು ರೂಪಿಸುವುದರಲ್ಲಿ ತಂದೆತಾಯಿಗಳ ಪಾತ್ರ.

ಮಕ್ಕಳ ಜೀವನವನ್ನು ರೂಪಿಸುವಲ್ಲಿ ತಂದೆ-ತಾಯಿಗಳ ಪಾತ್ರ ಬಹಳ ಮುಖ್ಯವಾದುದು.

ಮನೆಯೆ ಮೊದಲ ಪಾಠಶಾಲೆ
ಜನನಿ ತಾನೆ ಮೊದಲ ಗುರುವು
ಜನನಿಯಿಂದ ಪಾಠ ಕಲಿತ
ಜನರು ಧನ್ಯರು

ಎಂಬ ನಾಣ್ಣುಡಿಯಂತೆ ಮಗುವು ಹುಟ್ಟಿದ ಕ್ಷಣದಿಂದ ತಾಯಿಯ ಆಸರೆಯಲ್ಲಿ ಬೆಳೆಯುತ್ತದೆ. ತಾಯಿ ಮಗುವಿನ ಆರೈಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ. ಮಗ ಬೆಳೆದು ದೊಡ್ಡವನಾದ ಮೇಲೆ ತನ್ನ ಕುಟುಂಬದ ಜವಾಬ್ದಾರಿ ಹೊತ್ತು ನಿಭಾಯಿಸುವ ಪರಿಯ ಕನಸು ಕಾಣುತ್ತ ಸಂತೋಷಪಡುತ್ತಾಳೆ. ಬೆಳೆದು ವಿದ್ಯಾವಂತನಾಗಿ, ಸಮಾಜದ ವ್ಯಕ್ತಿಯಾಗಿ ರೂಪುಗೊಳ್ಳುವಲ್ಲಿ ತಾಯಿಯ, ತಂದೆಯ ಆಸೆ-ಆಕಾಂಕ್ಷೆಗಳು ಅನೇಕ ಹಾಗೂ ಊಹಾತೀತ.

ಆಚಾರಕ್ಕೆ ಅರಸಾಗು.
ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು; ನನ ಕಂದ,
ಜ್ಯೋತಿಯೆ ಆಗು ಜಗಕೆಲ್ಲ—

ಎಂಬ ನಮ್ಮ ಹಿಂದಿನವರ ಜಾನಪದ ಗೀತೆಯು ಇಂದು ಅಪ್ರಸ್ತುತವಾಗಿದೆ. ಇಂದಿನ ತಂದೆತಾಯಿಗಳಲ್ಲಿ ನನ್ನ ಮಗ ಹೇಗಾದರೂ ಮಾಡಿ ಕಡಿಮೆ ಅವಧಿಯಲ್ಲಿ ಹಣ ಸಂಪಾದಿಸುವ ವ್ಯಕ್ತಿಯಾಗಬೇಕು, ಅವನು ವೈದ್ಯನಾಗಬೇಕು, ಇಂಜಿನಿಯರಾಗಬೇಕು, ವಿದೇಶಕ್ಕೆ ಹೋಗಬೇಕು ಎಂಬ ಭ್ರಮೆಯಲ್ಲಿರುತ್ತಾರೆಯೇ ವಿನಃ ಒಳ್ಳೆಯ ಮಕ್ಕಳು ಹುಟ್ಟಿ ಈ ಸಮಾಜಕ್ಕೆ ಬೆಳಕಾಗಲಿ ಎಂದು ಹಾರೈಸುವ, ಆಶಿಸುವ ತಂದೆತಾಯಿಗಳು ವಿರಳವೆಂದೇ ಹೇಳಬೇಕಾಗುತ್ತದೆ.

ಮಗು ಶಾಲೆಯಲ್ಲಿ ಕಲಿಯುವ ಅವಧಿ ದಿವಕ್ಕೆ ಕೇವಲ ಬೆಳಗ್ಗೆ ೧೦ರಿಂದ ಸಂಜೆ ೪.೩೦ರವರೆಗೆ. ಇನ್ನು ಉಳಿದ ಹೆಚ್ಚು ಅವಧಿ ಮನೆಯಲ್ಲಿ, ಸಮಾಜದಲ್ಲಿ ಕಳೆಯುತ್ತದೆ. ಮಕ್ಕಳು ತಂದೆತಾಯಿಗಳ ದಿನಚರಿ, ಕೆಲಸ, ಅವರ ನಡೆ-ನುಡಿ, ಇವುಗಳನ್ನು ಹುಟ್ಟಿದಾಗಿನಿಂದಲೂ ಅನುಕರಣೆ ಮಾಡುತ್ತವೆ. ಒಳ್ಳೆಯ ಮಕ್ಕಳನ್ನು ರೂಪಿಸುವುದರಲ್ಲಿ ಮೊದಲು ತಂದೆತಾಯಿಗಳು ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿರಬೇಕಾಗುತ್ತದೆ. ಅವರ ಸಮಸ್ಯೆಗಳಿಗೆ, ಅವರ ಪ್ರಶ್ನೆಗಳಿಗೆ ಸಮರ್ಪಕ ಉತ್ತರವನ್ನು ಕೊಡುವ ಜವಾಬ್ದಾರಿಯುಳ್ಳವರಾಗಿರಬೇಕಾಗುತ್ತದೆ. ಏನೋ ನೆಪ ಹೇಳಿ ಮಕ್ಕಳ ಮನೋವಿಕಾಸಕ್ಕೆ ತೊಂದರೆಯಾಗುವಂತಹ ಸನ್ನಿವೇಶಗಳನ್ನು ಮನೆಯಲ್ಲಿ ನಿರ್ಮಾಣ ಮಾಡಬಾರದು. ಹೆಚ್ಚು ಸಮಯವನ್ನು ಅವರ ಜತೆ ಕಳೆಯಬೇಕು. ಕುಳಿತು ಒಳ್ಳೆಯ ಪುಸ್ತಕಗಳನ್ನೋದುವ ಅಭಿರುಚಿ ಬೆಳೆಸಿ, ಆದರ್ಶವ್ಯಕ್ತಿಗಳ ಕಥೆಗಳನ್ನು, ರಾಮಾಯಣ, ಮಹಾಭಾರತ ಕಥೆಗಳನ್ನು ತಿಳಿಸುವುದರಿಂದ ಮಕ್ಕಳಲ್ಲಿ ದೇಶಾಭಿಮಾನ ಮೂಡಿ, ನಮ್ಮ ಹಿರಿಯರು ಹೇಗೆ ಇದ್ದರು, ಎಂಬುದನ್ನು ಅರಿತು ನಾವು ಅವರಂತಾಗಬೇಕೆಂದು ಬಯಸುತ್ತಾರೆ.

ತಂದೆತಾಯಿಗಳು ಜವಾಬ್ದಾರಿಯಿಂದ ವರ್ತಿಸಿದರೆ ಒಳ್ಳೆಯ ಮಕ್ಕಳು ಹುಟ್ಟಿ ದೇಶ ಅಭಿವೃದ್ಧಿಯ ಪಥದಲ್ಲಿ ಸಾಗುತ್ತದೆ. ಎಷ್ಟೋ ತಂದೆತಾಯಿಗಳಿಗೆ ದಿನದಲ್ಲಿ ಅರ್ಧ ಗಂಟೆಯಾದರೂ ಒಟ್ಟಿಗೆ ಕುಳಿತು ಮಕ್ಕಳ ಭವಿಷ್ಯದ ಬಗ್ಗೆ ಚಿಂತಿಸಲು ಸಮಯ ಸಿಗುತ್ತಿಲ್ಲ. ಕಾರಣ ಅವರ ಜೀವನದ ಜಂಜಾಟ, ಉದ್ಯೋಗ ಇತ್ಯಾದಿ. ಇಬ್ಬರೂ ಉದ್ಯೋಗದಲ್ಲಿದ್ದರಂತೂ ಅವರ ಮಕ್ಕಳನ್ನು ನೋಡಿಕೊಳ್ಳುವವರೂ ಬಾಡಿಗೆ ಜನರು. ಅಂತಹ ಮಕ್ಕಳು ತಂದೆತಾಯಿಗಳ ಪ್ರೀತಿಯಿಂದ ವಂಚಿತರಾಗಿ ಮಾನಸಿಕ ಅಸ್ವಸ್ಥತೆಯಿಂದ ನರಳಬಹುದಾದ ಪ್ರಸಂಗಗಳೇ ಹೆಚ್ಚು. ಹಣಗಳಿಕೆಯೊಂದೇ ತಮ್ಮ ಗುರಿ ಎಂದು ತಿಳಿದು ಮಕ್ಕಳನ್ನು ಅಲಕ್ಷಿಸಿದರೆ ಸಂಪಾದಿಸಿದ ಹಣವನ್ನು ಪೋಲು ಮಾಡಲು ಅವರು ಉದಾಸೀನದಿಂದ ಬೆಳೆಸಿದ ಮಕ್ಕಳೇ ಸಾಕು.

—ಟಿ.ಜಿ. ಚಂದ್ರಶೇಖರ್, ಶಿಕ್ಷಕರು, ಅರಸೀಕೆರೆ.

ಶಿಸ್ತು, ಸ್ವಚ್ಛತೆ, ಪ್ರಾಮಾಣಿಕತೆ, ಧೈರ್ಯ, ನೀತಿವಂತಿಕೆ, ಸತ್ಯ, ಪರೋಪಕಾರ, ಕಷ್ಟಸಹಿಷ್ಣುತೆಯ ಸಾಕಾರಮೂರ್ತಿಗಳಾಗುವಂತೆ ಮಕ್ಕಳಿಗೆ ಸಂಸ್ಕಾರ ನೀಡುವುದು ಹಡೆದವರ ಕರ್ತವ್ಯವಾಗಿದೆ. ಚಿಕ್ಕಂದಿನಲ್ಲಿ ಪಡೆದ ಜ್ಞಾನ ಅವರ ಬದುಕಿನುದ್ದಕ್ಕೂ ಬೆಳಕು ನೀಡುವುದು, ಅವರಿಗೆ ದಾರಿದೀಪವಾಗುವುದು, ಅವರ ಬದುಕನ್ನು ನಿರ್ಮಿಸುವುದು, ಅವರು ಆದರ್ಶವ್ಯಕ್ತಿಗಳಾಗಿ ಬಾಳುವರು ಹಾಗೂ ಬದುಕಿನಲ್ಲಿ ಬರುವ ಸೋಲು, ಗೆಲುವುಗಳನ್ನು, ಸುಖದುಃಖಗಳನ್ನು ಸಮದೂಗಿಸಿಕೊಂಡು ನಡೆಯುವರು. ಅಂತಹ ಮಕ್ಕಳು ತಾಯಿತಂದೆಗಳಿಗೆ ಸಮಾಧಾನ ತರುವುದರ ಜೊತೆಗೆ ಸರ್ವರಿಗೂ ಪ್ರೀತಿಪಾತ್ರರಾಗಿ ಜೀವನದ ಸಾರ್ಥಕತೆ ಪಡೆಯುವರು. ಯಾವ ತಂದೆತಾಯಿಗಳು ಮಕ್ಕಳ ಪ್ರಗತಿಯಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಾರೋ ಅಂತಹವರ ಮಕ್ಕಳು ಒಳ್ಳೆಯ ವಿದ್ಯಾವಂತರೂ, ಬುದ್ಧಿವಂತರೂ ಆಗುವುದರಲ್ಲಿ ಸಂದೇಹವೇ ಇಲ್ಲ. ಮಕ್ಕಳನ್ನು ಬಿಗಿ ಹಿಡಿತದಲ್ಲಿ ಬೆಳೆಸದೆ, ಸಹಬಾಳ್ವೆಯ ಮಹತ್ವವನ್ನು ತಿಳಿಸಬೇಕು ಮತ್ತು ಹಿರಿಯರಿಗೆ ಗೌರವ ಕೊಡುವುದನ್ನು ಕಲಿಸಬೇಕು. ಪ್ರತಿಯೊಂದು ಕ್ಷಣಕ್ಷಣಕ್ಕೂ ಬುದ್ಧಿವಾದಗಳನ್ನು ಹೇಳುತ್ತ ಅವರಲ್ಲಿ ಉದಾತ್ತ ಭಾವನೆಗಳನ್ನೂ ಸ್ಥಿರ

ಮನಸ್ಸನ್ನೂ ತರಿಸುವುದು ಮಾತೆಯ ಕರ್ತವ್ಯ. ಜೀವನೋಪಾಯಕ್ಕೆ ನೆರವಾಗುವ ವಿದ್ಯೆ ತಂದೆಯು ಹೇಳಿಕೊಡುವ ಶ್ರೇಷ್ಠ ವಿದ್ಯೆ. ಅವರ ಮನಸ್ಸಿಗೆ ಹಿಡಿಯುವಂತೆ ಸಂತೋಷದಿಂದ ಹೇಳಬೇಕು. ಮಕ್ಕಳ ಜೀವನದಲ್ಲಿ ಒಳ್ಳೆಯ ಸಂಸ್ಕಾರ ರೂಪಿಸುವಲ್ಲಿ ತಂದೆತಾಯಿಗಳಿಗಿಂತ ಇತರರೇನು ಮಾಡಿಯಾರು?

—ಶ್ರೀಮತಿ ವಿದ್ಯಾ,ಬಿ. ಅಪ್ಪಣ್ಣನವರ, ರಾಣೆಬೆನ್ನೂರು.

"ಯಾವ ವ್ಯಕ್ತಿಯು ಮಗುವಿನ ಮುಗ್ಧ ಮನಸ್ಸನ್ನು ತನ್ನ ಜೀವನದ ಕೊನೆಯವರೆಗೂ ಇರಿಸಿಕೊಂಡಿರುತ್ತಾನೋ ಅವನು ಮಹಾತ್ಮನೆನಿಸುತ್ತಾನೆ" ಎಂಬ ಮಾತು ಮಗುವಿನ ಮಹತ್ವವನ್ನು ಸಾರುತ್ತದೆ. ಮಕ್ಕಳು ದೇವರಿಗೆ ಸಮಾನ, ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು, ಮಕ್ಕಳು ಮನುಜಗೆ ತಂದೆ, ಇತ್ಯಾದಿ ನುಡಿಗಳೂ ಮಕ್ಕಳ ಪ್ರಾಮುಖ್ಯವನ್ನು ತಿಳಿಹೇಳುತ್ತವೆ.

**ಮಕ್ಕಳಿಗಾಗಿ ನೀಡುವ ಸಮಯ ವ್ಯಾಪಾರಕ್ಕಾಗಿ ನೀಡುವ ಸಮಯಕ್ಕಿಂತ ಹೆಚ್ಚು ಲಾಭದಾಯಕ.**

ಇಂದಿನ ವೇಗದ ಬದುಕಿನಲ್ಲಿ ಜನರಿಗೆ ಯಾವುದಕ್ಕೂ ಸಮಯವಿಲ್ಲ. ಒಂದು ಕುಟುಂಬದಲ್ಲಿ ಗಂಡಹೆಂಡತಿಯರಿಬ್ಬರೂ ಉದ್ಯೋಗಸ್ಥರಾದರೆ, ಆಫೀಸಿನ ಕೆಲಸ, ಮನೆಯ ಕೆಲಸಗಳ ನಡುವೆ ಅವರಿಗೆ ಸಮಯದ ಅಭಾವ. ಇಂತಹ ಕುಟುಂಬಗಳಲ್ಲಿ ಮಕ್ಕಳ ಬಗ್ಗೆಯಾಗಲಿ ಸಮಾಜದ ಕುರಿತಾಗಲೀ ಯೋಚಿಸಲೂ ಸಮಯವಿಲ್ಲವೆಂದು ಗೊಣಗುತ್ತಿರುತ್ತಾರೆ. ಇನ್ನು ವ್ಯವಹಾರಸ್ಥರಾದರೆ ದಿನದ ಇಪ್ಪತ್ನಾಲ್ಕು ಗಂಟೆಗಳಲ್ಲಿಯೂ ವ್ಯವಹಾರದ ಬಗ್ಗೆಯೇ ಆಲೋಚಿಸಿಕೊಂಡಿರುತ್ತಾರೆ. ಇಂತಹ ಕುಟುಂಬಗಳಲ್ಲೆಲ್ಲ ಮಕ್ಕಳು ನಿರ್ಲಕ್ಷಿಸಲ್ಪಟ್ಟಿರುತ್ತಾರೆ. ಇದು ಸರಿಯಲ್ಲ.

ಮಾನವನ ಮೆದುಳಿನ ಶೇಕಡ ತೊಂಭತ್ತರಷ್ಟು ಬೆಳವಣಿಗೆ, ಆತನಿಗೆ ಆರು ವರ್ಷ ವಯಸ್ಸಾಗುವಾಗ ಆಗಿರುತ್ತದೆ. ವಯಸ್ಕರಿಗಿಂತ ಮಕ್ಕಳು ಚುರುಕಾಗಿರುತ್ತಾರೆ. ಗಮನಿಸುವುದರಲ್ಲಿ ಮುಂದಿರುತ್ತಾರೆ. ದೊಡ್ಡವರು ಹೇಳಿದ್ದನ್ನು ಕೇಳುವುದರಲ್ಲಿ ಹಾಗೂ ಅವರ ನಡೆ-ನುಡಿಗಳನ್ನು ಅನುಸರಿಸುವುದರಲ್ಲಿ ಮಕ್ಕಳು ಸದಾ ಆಸಕ್ತರಾಗಿರುತ್ತಾರೆ. ಆದ್ದರಿಂದ ದೊಡ್ಡವರು ಮಕ್ಕಳ ಎದುರು ಹಾಗೂ ಮಕ್ಕಳೊಂದಿಗೆ ವ್ಯವಹರಿಸುವಾಗ ತುಂಬ ಜಾಗರೂಕರಾಗಿರಬೇಕಾಗುತ್ತದೆ. ಮಕ್ಕಳು ಹಿರಿಯರ, ಮುಖ್ಯವಾಗಿ ತಾಯಿತಂದೆಗಳ ಪ್ರೀತಿ, ಮಾರ್ಗದರ್ಶನವನ್ನು ಬಯಸುತ್ತಾರೆ. ತಂದೆತಾಯಿಗಳು ಇದನ್ನು ಅರ್ಥಮಾಡಿಕೊಂಡು ಮಕ್ಕಳೊಂದಿಗೆ ವ್ಯವಹರಿಸಬೇಕು. ಮಕ್ಕಳೊಂದಿಗೆ ಆಟವಾಡುವಾಗ ದೊಡ್ಡವರಂತೆ ವರ್ತಿಸದೆ ಮಕ್ಕಳಂತೆಯೇ ಇರಬೇಕು. ಆಗ ಮನಸ್ಸು ನಿರಾಳವಾಗಿರುತ್ತದೆ. ರಕ್ತದೊತ್ತಡ, ಮಾನಸಿಕ ಬೇಸರ ಯಾವುದೂ ನಮ್ಮನ್ನು ಕಾಡದು.

ಮಕ್ಕಳಿಗೆ ಯೋಗ್ಯಶಿಕ್ಷಣವನ್ನು ಅವರ ಆಸಕ್ತಿ, ಅಭಿರುಚಿಗೆ ಅನುಗುಣವಾಗಿ ನೀಡುವುದು ಪ್ರತಿಯೊಬ್ಬ ತಾಯಿತಂದೆಗಳ ಕರ್ತವ್ಯ. ಇದರೊಂದಿಗೆ ಮಕ್ಕಳಲ್ಲಿ ಮಾನವೀಯತೆಯನ್ನು, ಜೀವನಮೌಲ್ಯಗಳನ್ನು ಬೆಳೆಸಬೇಕು. ಮಕ್ಕಳನ್ನು ಪ್ರೀತಿಸುವುದರ ಜೊತೆಗೆ ಅವರು ತಪ್ಪು ಮಾಡಿದಾಗ, ಸರಿಯಾದುದನ್ನು ಅವರಿಗೆ ಅರ್ಥವಾಗುವಂತೆ ತಿಳಿಸಬೇಕು. ಮಗು ಬಿದ್ದಾಗ ಏಳಲು ಪ್ರಯತ್ನಿಸುತ್ತದೆ, ಏಳುವಂತೆ ಸಹಕರಿಸುವುದು ತಾಯಿತಂದೆಗಳ ಕರ್ತವ್ಯ. ಪ್ರೀತಿವಂಚಿತ, ಶಿಕ್ಷಣರಹಿತ ಮಕ್ಕಳು ಮುಂದೆ ಸಮಾಜಕ್ಕೆ ಹೊರೆಯಾಗುತ್ತಾರೆ ಎಂಬುದನ್ನು ಮರೆಯಬಾರದು. ಪ್ರತಿಯೊಬ್ಬ ತಾಯಿತಂದೆಗಳೂ ದಿನದಲ್ಲಿ ಕನಿಷ್ಠ ಒಂದು ಗಂಟೆಯನ್ನಾದರೂ ತಮ್ಮ ಮಕ್ಕಳೊಂದಿಗೆ ಆಟವಾಡಲು, ನಕ್ಕು ನಗಿಸಲು ಸಮಯವನ್ನು ಮೀಸಲಿರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. —ಎನ್. ಯಜ್ಞನಾರಾಯಣ ಉಳ್ಳೂರ್.

ಒಮ್ಮೆ ಅಶ್ವಿನಿ ದೇವತೆಗಳು ಭೂಲೋಕದ ಒಬ್ಬ ರಾಜನ ಆಸ್ಥಾನಕ್ಕೆ ಬಂದು ಅವನನ್ನು ಕಾಣಬಯಸುತ್ತಾರೆ. ರಾಜನು ಅಭ್ಯಂಜನಕ್ಕೆಂದು ಮೈಗೆಲ್ಲ ಎಣ್ಣೆ ಬಳಿದುಕೊಂಡು ಸ್ನಾನಗೃಹದಲ್ಲಿರುತ್ತಾನೆ. ಇನ್ನು ಹತ್ತು ನಿಮಿಷದಲ್ಲಿ ಬರುವೆನೆಂದು ಭಟರೊಂದಿಗೆ ಹೇಳಿಕಳಿಸುತ್ತಾನೆ. ಆದರೆ ತಾವು ಈಗಲೇ ರಾಜನನ್ನು ಕಾಣಬೇಕೆಂದು ಆಗ್ರಹ ಪಡಿಸುತ್ತಾರೆ. ವಿಧಿಯಿಲ್ಲದೆ ರಾಜನು ಒಂದು ವಸ್ತ್ರವನ್ನುಟ್ಟು ಬಂದು ಕೈಜೋಡಿಸಿ ನಿಲ್ಲುತ್ತಾನೆ. ಮುಗುಳು ನಗೆಯೊಂದಿಗೆ ಅಶ್ವಿನಿ ದೇವತೆಗಳು "ಆಗಬಹುದು ರಾಜ. ಬೇಗನೆ ಸ್ನಾನ ಮುಗಿಸಿ ಬಾ" ಎಂದು ಮತ್ತೆ ಕಳಿಸುತ್ತಾರೆ. ಹತ್ತು ನಿಮಿಷದಲ್ಲಿ ಸ್ನಾನಮುಗಿಸಿದ ರಾಜನು ಭಾರಿ ಪೀತಾಂಬರ ಹಾಗೂ ಒಳ್ಳೆಯ ಆಭರಣಗಳಿಂದ ತನ್ನನ್ನು ಅಲಂಕರಿಸಿಕೊಂಡು ತಾನು ತುಂಬಾ ಸುಂದರನಾಗಿ ಕಾಣುತ್ತಿರುವೆನೆಂಬ ಜಂಭದಿಂದ ದೇವತೆಗಳೆದುರು ನಿಲ್ಲುತ್ತಾನೆ. ಆಗ ರಾಜನನ್ನು ಕಂಡ ಅಶ್ವಿನಿ ದೇವತೆಗಳು ಗೊಳ್ಳೆಂದು ನಕ್ಕು ಹತ್ತು ನಿಮಿಷಗಳಲ್ಲಿ ನೀನು ಎಷ್ಟೊಂದು ಮುದುಕನಂತೆ ಕಾಣುತ್ತಿದ್ದಿ ಎಂದರು. ರಾಜನು ಆಶ್ಚರ್ಯದೊಂದಿಗೆ ತಬ್ಬಿಬ್ಬಾಗುತ್ತಾನೆ.

ಅಶ್ವಿನಿದೇವತೆಗಳು ಸ್ವರ್ಗಲೋಕದ ವೈದ್ಯರು. ಅತ್ಯಂತ ತೀಕ್ಷ್ಣ ಬುದ್ಧಿಯುಳ್ಳವರು. ಅವರು ಮುಂದೆ ರಾಜನು ವಯಸ್ಸಾದಾಗ ಅವನ ದೇಹದಲ್ಲಿ ಉಂಟಾಗಬಹುದಾದ ಬದಲಾವಣೆಯನ್ನು ಆಗಲೇ ಕಂಡರು. ಶ್ರೀಕೃಷ್ಣನು ಅರ್ಜುನನಿಗೆ ವಿಶ್ವರೂಪದರ್ಶನ ಮಾಡಿಸಿದಾಗ ಎದುರಿಗಿದ್ದ ಕೌರವರ ಸೈನ್ಯವೆಲ್ಲ ಶ್ರೀಕೃಷ್ಣನ ಬಾಯಿಗೆ ಸಿಕ್ಕಿ ಪುಡಿಪುಡಿಯಾಗುವುದು ಕಂಡಿತು. ಸಾಮಾನ್ಯವಾಗಿ ದೇವತೆಗಳಿಗೆ, ಅಪರೋಕ್ಷಜ್ಞಾನಿಗಳಿಗೆ ಇವೆಲ್ಲ ಮುಂಚಿತವಾಗಿ ಗೋಚರಿಸುತ್ತವೆ.

ಅದೇ ರೀತಿ ಪ್ರತಿಯೊಬ್ಬ ಮನುಷ್ಯನಲ್ಲೂ ಕ್ಷಣ ಕ್ಷಣಕ್ಕೂ ಜೀವಕೋಶಗಳಲ್ಲಿ ಸೂಕ್ಷ್ಮವಾಗಿ ಬದಲಾವಣೆಗಳಾಗುತ್ತಾ ಒಮ್ಮೆ ಮುಪ್ಪು ಆವರಿಸುತ್ತದೆ. ನಾವು ಚಿಕ್ಕ ವಯಸ್ಸಿನಿಂದಲೇ ಸತ್ಕರ್ಮ

ಧರ್ಮಾಚರಣೆಗಳನ್ನು ನಡೆಸುತ್ತಾ ಬಂದಿದ್ದರೆ ಅವು ನಮ್ಮೊಂದಿಗೆ ಬೆಳೆದು ವಯಸ್ಸಾದ ದಿನಗಳಲ್ಲೂ ನಮ್ಮೊಂದಿಗೆ ಹಾಸು ಹೊಕ್ಕಾಗಿರುತ್ತವೆ. ಬದಲಿಗೆ ಚಿಕ್ಕ ವಯಸ್ಸಿನಿಂದಲೂ ಬರೀ ಲೌಕಿಕದಲ್ಲೇ ಆಸಕ್ತವಾಗಿದ್ದು ವಯಸ್ಸಾದ ಮೇಲೆ ಧರ್ಮಾಚರಣೆ ಮಾಡೋಣವೆಂದು ಕಾದರೆ ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ? ಎಂಬಂತೆ ಶಕ್ತಿಕುಂದಿದ ನಮ್ಮ ಇಂದ್ರಿಯ, ಮೈ-ಮನಸ್ಸುಗಳು ನಮ್ಮೊಂದಿಗೆ ಸಹಕರಿಸುವುದಿಲ್ಲ.

***ನೈತಿಕತೆಯನ್ನು ಭೋದಿಸುವ ಅತ್ಯುತ್ತಮ ವಿಧಾನವೆಂದರೆ ಮಕ್ಕಳಲ್ಲಿ ಅದು ಅಭ್ಯಾಸವಾಗುವಂತೆ ಮಾಡುವುದು* — ಅರಿಸ್ಟಾಟಲ್**

ಆದ್ದರಿಂದ ನಾವು ಧರ್ಮಾಚರಣೆಗಳನ್ನು ನಡೆಸುತ್ತಾ ನಮ್ಮ ಮಕ್ಕಳಿಗೂ ಚಿಕ್ಕ ವಯಸ್ಸಿನಿಂದಲೇ ನಮ್ಮ ಆಚಾರ-ವಿಚಾರ, ನಡೆ-ನುಡಿ ಸಂಸ್ಕೃತಿಗಳನ್ನು ಕಲಿಸಬೇಕು. ನಮ್ಮ ಪುರಾಣ, ಇತಿಹಾಸಗಳಲ್ಲಿ ಬರುವ ಆದರ್ಶ ಹಾಗೂ ಸಾಹಸಿ ಪುರುಷರ, ವೀರ ಮಹಿಳೆಯರ ಕತೆಗಳನ್ನು ಹೇಳಿ, ಅವರು ಓದುವಂತಾದಾಗ ಚಿತ್ರ ಸಹಿತವಾದ ಆ ಪುಸ್ತಕಗಳನ್ನೇ ತಂದು ಕೊಟ್ಟು ಅವರಿಂದಲೂ ಓದಿಸಬೇಕು. ಇದರಿಂದ ಮಕ್ಕಳಲ್ಲಿ ಸಚ್ಚಾರಿತ್ರ್ಯ ಮೂಡಿ ಅವರ ಜೀವನಮೌಲ್ಯ ಉತ್ತಮಗೊಳ್ಳುತ್ತದೆ. ಧ್ರುವ, ಪ್ರಹ್ಲಾದ, ನಚಿಕೇತ ಇವರೆಲ್ಲ ಸಣ್ಣಪ್ರಾಯದಲ್ಲೆ ಭಗವಂತನನ್ನು ಒಲಿಸಿಕೊಂಡು ಅದ್ಭುತ ಸಾಧನೆಗೈದವರು. ಇವರ ಆದರ್ಶ ನಮ್ಮ ಮಕ್ಕಳಿಗೆ ದಾರಿದೀಪವಾಗಬೇಕು.

ಕೇವಲ ಸಿನಿಮಾದ ನಟ-ನಟಿಯರು, ಆಟಗಾರರು ಇವರ ಹೆಸರು, ಜೀವನ ಚರಿತ್ರೆ ತಿಳಿದುಕೊಂಡು, ಸಿನಿಮಾ ಹಾಡುಗಳನ್ನು ಹಾಡಿ, ಡಿಸ್ಕೋ ಡಾನ್ಸ್‌ಗಳನ್ನು ಕುಣಿದ ಮಾತ್ರಕ್ಕೆ ನಮ್ಮ ಮಕ್ಕಳು ಬುದ್ಧಿವಂತರೆಂದು ಜಂಭಪಟ್ಟರೆ, ನಾಳೆ ಆ ನಾಯಕರ ಜೀವನವನ್ನೇ ಆದರ್ಶವೆಂದು ಅನುಕರಿಸಿ ಕುಡಿತ, ಜೂಜು, ಸೇಡಿನ ಮನೋಧರ್ಮ, ಸ್ವೇಚ್ಛಾಚಾರ ಇವುಗಳನ್ನು ಮಕ್ಕಳು ಆಚರಣೆಗೆ ತಂದರೆ ಜೀವನವಿಡೀ ನಾವೇ ಕಣ್ಣೀರಿಡಬೇಕಾಗುತ್ತದೆ.

***—ಗೀತಾ ಕೆ. ಮೂರ್ತಿ***

**ಮ**ಕ್ಕಳ ಜೀವನವನ್ನು ರೂಪಿಸುವುದರಲ್ಲಿ ತಂದೆತಾಯಿಗಳ ಪಾತ್ರ ಬಹುಮುಖ್ಯವಾದದ್ದು. ಇದು ಒಬ್ಬ ಶಿಲ್ಪಿ ಒಂದು ಶಿಲ್ಪವನ್ನು ಕೆತ್ತಿದಂತೆ. ಶಿಲ್ಪಿ ತಾನು ಕೆತ್ತುತ್ತಿರುವ ಶಿಲ್ಪದ ಮೇಲೆ ಸ್ವಲ್ಪ ಆಸಕ್ತಿಹೀನನಾದರೆ ಆ ಶಿಲ್ಪದ ಆಕಾರ ಹೇಗೆ ಕೆಡುತ್ತದೆಯೋ ಹಾಗೆ ತಂದೆತಾಯಿಗಳು ತಮ್ಮ ಮಕ್ಕಳನ್ನು ನೋಡಿಕೊಳ್ಳುವಲ್ಲಿ ಸ್ವಲ್ಪ ಎಡವಟ್ಟಾದರೆ ಮುಂದೆ ತಾವು ಬಯಸಿದಂಥ ಮಕ್ಕಳು ತಮಗೂ ಸಿಗುವುದಿಲ್ಲ ಮತ್ತು ದೇಶಕ್ಕೂ ಒಳ್ಳೆಯ ಪ್ರಜೆಗಳು ಸಿಗುವುದಿಲ್ಲ. ತಂದೆತಾಯಿಗಳು ಮಕ್ಕಳನ್ನು ಗಾಢವಾಗಿ ಪ್ರೀತಿಸಿದರೆ ಮಗುವಿಗೆ ಪ್ರೀತಿಯ ಅರ್ಥವಾಗುತ್ತದೆ, ಮತ್ತು ತಂದೆತಾಯಿಗಳ ಮೇಲೆ ನಂಬಿಕೆ ಬರುತ್ತದೆ. ತಂದೆತಾಯಿಗಳು ಮಕ್ಕಳನ್ನು ಬರೀ ಯಂತ್ರದ ಮೂಲಕ ಸಂತೋಷಪಡಿಸುವುದಲ್ಲ. ಅವರೇ ಹತ್ತಿರ ಇದ್ದು ಮಕ್ಕಳಿಗೆ ವಿಧ-ವಿಧದ ಪುಸ್ತಕ ಓದಿ ಹೇಳುವುದು ಮತ್ತು ಅವರ ಮೇಲೆ ಪ್ರಭಾವ ಬೀರುವಂತಹ ಕಥೆಗಳನ್ನು ಹೇಳುವುದು ಹೆಚ್ಚು ಪರಿಣಾಮಕಾರಿ ಮತ್ತು ಇದು ತನ್ನ ತಂದೆತಾಯಿಗಳೊಂದಿಗೆ ಮಕ್ಕಳು ಭಾವನಾತ್ಮಕ ಸಂಬಂಧ ಹೊಂದಲು ಹೆಚ್ಚು ಸಹಾಯಕಾರಿ. ಇದರಿಂದ ಮಗು ಆರೋಗ್ಯವಾಗಿ ಆತ್ಮ-ವಿಶ್ವಾಸದೊಂದಿಗೆ ಬೆಳೆಯುತ್ತದೆ.

"ಯಾವುದೇ ಮಕ್ಕಳು ನಿಮ್ಮನ್ನು ನೆನೆಸಿಕೊಳ್ಳುವುದು ನೀವು ಒದಗಿಸಿದ ಭೌತಿಕ ವಸ್ತುಗಳಿಂದ ಅಲ್ಲ, ನೀವು ಅವರ ಮೇಲೆ ಹರಿಸಿದ ಭಾವಧಾರೆಯಿಂದ" ಎಂದು ಹೇಳುತ್ತಾನೆ ರಿಚರ್ಡ್ ಎಲ್. ಇವಾನ್ಸ್. ಹೀಗೆ ಮಕ್ಕಳು ಯಾವಾಗಲೂ ಬಯಸುವುದು ತಂದೆ-ತಾಯಿಯರ ಪ್ರೀತಿಯನ್ನು ಮತ್ತು ಅವರೊಡನೆ ಕಳೆಯಲು ಸ್ವಲ್ಪ ಸಮಯಾವಕಾಶವನ್ನು. ಇದನ್ನು ತಂದೆತಾಯಿಗಳು ಅರ್ಥಮಾಡಿಕೊಳ್ಳಬೇಕು. ತಂದೆತಾಯಿಗಳು ಮಕ್ಕಳಿಗಾಗಿ ಸ್ವಲ್ಪ ಆಸ್ತಿಯನ್ನು ಮಾಡಿಟ್ಟು ಹೋಗುವ ಅಗತ್ಯವಿಲ್ಲ. ಅವರಿಗೆ ಶ್ರೇಷ್ಠ ಜೀವನಕ್ರಮ, ಒಳ್ಳೆಯ ವಿದ್ಯಾಭ್ಯಾಸ ಮತ್ತು ಒಳ್ಳೆಯ ಆರೋಗ್ಯ—ಇವನ್ನು ಬೆಳೆಸಲು ಅನುವು ಮಾಡಿಕೊಟ್ಟರೆ, ಮುಂದೆ ತಮ್ಮ ಜೀವನವನ್ನು ತಾವೇ ನಿರ್ವಹಿಸುತ್ತಾರೆ. ತಂದೆತಾಯಿಗಳು ಮಕ್ಕಳಲ್ಲಿ ಇತರರೊಂದಿಗೆ ಪ್ರೀತಿಯಿಂದ ಬೆರೆಯುವ ವಿಧಾನ ಸಾಮಾಜಿಕ ಪ್ರಜ್ಞೆ ಮತ್ತು ಹಿರಿಯರೊಂದಿಗೆ ಹೇಗೆ ಇರಬೇಕೆಂಬ ವಿಧೇಯತೆ ಮುಂತಾದ ಗುಣಗಳನ್ನು ತಿಳಿಸಿಕೊಡಬೇಕು. ಅವರ ಮೇಲೆ ಅವರಿಗೆ ಆತ್ಮವಿಶ್ವಾಸ ಬರುವಂತೆ ಮಾಡುವುದು ನೀವು ನೀಡುವ ಭೌತಿಕ ಆಸ್ತಿಗಿಂತ ದೊಡ್ಡ ಆಸ್ತಿ. ಅವರ ಮೇಲೆ ಒತ್ತಡ ಹೇರದೆ ಅವರು ಸ್ವತಂತ್ರವಾಗಿ ಮತ್ತು ಸಂತೋಷವಾಗಿ ಬೆಳೆಯಲು ತಂದೆತಾಯಿಗಳು ಇನ್ನು ಮುಂದಾದರೂ ಮಕ್ಕಳಿಗೆ ಅನುವು ಮಾಡಿಕೊಡಬೇಕು.

***—ಎಚ್.ಆರ್. ಪಾರ್ವತಿ, ಹಿರಿಯೂರು.***

**ತಂ**ದೆತಾಯಿಗಳು ಕೊನೇಪಕ್ಷ ತಮ್ಮ ಮಕ್ಕಳು ದೊಡ್ಡವರಾಗುವವರೆಗೆ, ಅಂದರೆ ಕಾಲೇಜಿಗೆ ಹೋಗುವವರೆಗಾದರೂ ಅವರ ವಿಷಯದಲ್ಲಿ ತೀವ್ರ ಕಾಳಜಿ ವಹಿಸಬೇಕು. ಅವರ ಊಟ-ತಿಂಡಿಗಳಲ್ಲಿ ಹೇಗೋ ಹಾಗೆ, ಆಟಪಾಠಗಳಲ್ಲೂ ಸಹಭಾಗಿಗಳಾಗಿರಬೇಕು. ಅವರಿಗೆ ಏನು ಬೇಕು, ಏನು ಬೇಡ ಎಲ್ಲ ತಿಳಿದುಕೊಂಡು ಸಾಧ್ಯವಾದಷ್ಟೂ ಅವರಿಗೆ ಒಳ್ಳೆಯ ಮಾತಿನಲ್ಲೇ ಬುದ್ಧಿ ಹೇಳಿ, ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಅವರ ಆಸೆಗಳನ್ನು ಪೂರೈಸಬೇಕು. ಮಕ್ಕಳು ಹೇಗೋ ಇರುತ್ತಾರೆ ಎಂದು ಅವರನ್ನು ಕಡೆಗಣಿಸಿ, ತಮ್ಮ ಸ್ವಾರ್ಥಸುಖವೇ ದೊಡ್ಡದೆಂದೆಣಿಸಿ ಅವರನ್ನು ಮನೆಯಲ್ಲೇ ಬಿಟ್ಟು ಹೋಟೆಲ್, ಸಿನಿಮಾ, ಪಾರ್ಟಿಗಳಿಗೆ ಹೋಗುವುದು, ದಿನಗಳಗಟ್ಟಳೆ ಟೂರ್ ಹೋಗುವುದು—ಇವೆಲ್ಲವೂ ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಅವರೂ ಸಹ ಕೆಟ್ಟವರ ಸಹವಾಸ ಮಾಡಿ, ಬೀಡಿ, ಸಿಗರೇಟು

ಸೇರುತ್ತಾ ಕ್ಲಬ್, ಪಾರ್ಟಿ ಎಂದು ಅಲೆಯಲು ಕಲಿಯುತ್ತಾರೆ. ಒಮ್ಮೆ ಇವುಗಳ ಚಟ ಹಿಡಿದರೆ ನಂತರ ಏನೂ ಮಾಡಲಾಗುವುದಿಲ್ಲ. ಆಗ ಪಶ್ಚಾತ್ತಾಪ ಪಡಬೇಕಾಗುತ್ತದೆ. ಅದಕ್ಕಾಗಿ ಮಕ್ಕಳು ಚಿಕ್ಕವರಿರುವಾಗಲೇ ಅವರನ್ನು ತಿದ್ದುತ್ತಾ ಒಳ್ಳೆಯ ಬುದ್ಧಿ, ನಡೆವಳಿಕೆಯನ್ನು ರೂಪಿಸಿ, ಅವರಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಬೇಕು. ಮಕ್ಕಳನ್ನು ಬೆಳೆಸಲು ಹಣ ಬೇಕು ಎಂದು ಸಿಕ್ಕಾಪಟ್ಟೆ ದುಡಿಯಲು ಹೋದರೆ ಮಕ್ಕಳ ಜೊತೆ ತಂದೆ ತಾಯಿಗಳು ಇರಲಿಕ್ಕಾಗುವುದಿಲ್ಲ. ತಮ್ಮ ಮಕ್ಕಳ ಬಗ್ಗೆ ತಂದೆ ತಾಯಿಗಳಿಗಿಂತಲೂ ಕಾಳಜಿಯುಳ್ಳವರು ಬೇರೆ ಯಾರೂ ಇರುವುದಿಲ್ಲ ಎಂಬುದನ್ನು ತಿಳಿಯಬೇಕು.

—ಯಶೋದ ಶಿವಲಿಂಗಪ್ಪ, ತುಮಕೂರು.

**ನಮ್ಮ ಕೃತಿಯಲ್ಲಿ ಪ್ರತಿಬಿಂಬಿಸುವ ನೈತಿಕತೆಯೊಂದೇ ನಮ್ಮ ಜೀವನಕ್ಕೆ ಸೌಂದರ್ಯವನ್ನೂ ಘನತೆಯನ್ನೂ ನೀಡುವುದು.** — ಆಲ್ಬರ್ಟ್ ಐನ್‌ಸ್ಟೈನ್.

ತಾಯಿಯು ಮಗುವಿಗೆ ಮೊಲೆಯೂಡಿಸುತ್ತಲೇ ನಿಸ್ವಾರ್ಥವಾದ ಪ್ರೇಮಯುತವಾದ ಪಾಠಕಲಿಸುವಳು. ಹುಟ್ಟಿದಂದಿನಿಂದಲೂ ತಂದೆತಾಯಿಗಳೊಡನೆಯೇ ಇರುವ ಮಗುವು ಅವರ ಮೇಲ್ಪಂಕ್ತಿಯನ್ನೇ ಅನುಸರಿಸುವುದು ಸಹಜ. ಒಂದು ಸಣ್ಣ ಕಳ್ಳತನ ಅಥವಾ ಸುಳ್ಳುತನಕ್ಕೆ ತಂದೆತಾಯಿಗಳಿಂದೇನಾದರೂ ಪರೋಕ್ಷವಾಗಿ ಸ್ವಲ್ಪ ಪ್ರೋತ್ಸಾಹ ಸಿಕ್ಕಿದರೂ ಸಾಕು, ಮಗುವಿನ ಕಥೆ ಮುಗಿಯಿತು. ಅದು ದೊಡ್ಡ ವಿಷವೃಕ್ಷವಾಗಿ ಬೆಳೆದು ಸಮಾಜಕಂಟಕನೋ ದೇಶದ್ರೋಹಿಯೋ ಆಗುವ ಸಾಧ್ಯತೆ ಹೆಚ್ಚು. ಇದು ತಂದೆತಾಯಿಗಳು ಸರಿಯಾದ ಸಮಯದಲ್ಲಿ ಮಾರ್ಗದರ್ಶನ ಮಾಡದ ಅಕ್ಷಮ್ಯ ಅಪರಾಧ. ಚಿಕ್ಕಂದಿನಿಂದ ಪೈಪೋಟಿ, ಸೇಡು, ಮೋಸ, ಡಾಂಭಿಕತೆಗಳೆಡೆಗೇ ಒಲವು. ಹೇಗಾದರೂ ಮಕ್ಕಳು ಡಾಕ್ಟರುಗಳು, ಇಂಜನಿಯರುಗಳು, ದೊಡ್ಡ ದೊಡ್ಡ ಆಫೀಸರುಗಳಾಗಿ ಬಿಡಬೇಕು. ಹೆಚ್ಚು ಹೆಚ್ಚು ಸಂಪಾದನೆ ಮಾಡಬೇಕು. ಈ ಮೂಲಕ ಸಾಮಾಜಿಕ ಪ್ರತಿಷ್ಠೆ ಮತ್ತು ಘನತೆಯನ್ನು ಅವರು ಬಯಸುತ್ತಾರೆ. ಬೇರೊಬ್ಬರಿಗಿಂತ ತಾವು ಹೆಚ್ಚು ಎನ್ನುವ ಕೆಟ್ಟಭಾವನೆಯನ್ನು ತಾವೂ ಇಟ್ಟುಕೊಂಡು ಮಕ್ಕಳಿಗೂ ಕಲಿಸುವರು. ಮಕ್ಕಳು ದೇಶದ್ರೋಹಿಗಳಾಗಿ, ತಾವೂ ಹಾಳಾಗಿ ಸಮಾಜವನ್ನೂ ಹೊಲಸು ಮಾಡುವರು. ಅದಕ್ಕಾಗಿಯೇ ಮೊದಲು ತಂದೆತಾಯಿಗಳು ಸುಸಂಸ್ಕೃತರಾಗಿ ಮಕ್ಕಳಲ್ಲಿ ರಾಷ್ಟ್ರಪ್ರಜ್ಞೆ, ದೇಶಭಕ್ತಿ, ವಿನಯ ವಿಧೇಯತೆ, ಗುರುಹಿರಿಯರಲ್ಲಿ ಗೌರವ, ಸಹಬಾಳ್ವೆಯ ಸಮದೃಷ್ಟಿಯ ಪರಿಜ್ಞಾನ ಮೂಡಿಸಬೇಕು. ಸಮಾಜದಲ್ಲಿನ ಕೆಲವು ಕೀಳುದರ್ಜೆಯ ಪ್ರಲೋಭನೆಗಳು ಮತ್ತು ಕೆಟ್ಟ ಆಲೋಚನೆಗಳಿಂದ ದೂರವಿರಲು ಮಕ್ಕಳಲ್ಲಿ ಮನೋಬಲ, ಆತ್ಮಬಲವನ್ನು ಜಾಗೃತಗೊಳಿಸಬೇಕು. ಮಕ್ಕಳು ಬಾಲ್ಯದಲ್ಲಿ ಅಪಾರ ಸಾಮರ್ಥ್ಯ ಪಡೆದಿರುತ್ತಾರೆ. ಆ ಸಾಮರ್ಥ್ಯಕ್ಕೆ ಉತ್ತಮವಾದ ಮಾರ್ಗದರ್ಶನ ನೀಡುವುದು ತಂದೆತಾಯಿಗಳ ಆದ್ಯ ಕರ್ತವ್ಯ. "ತಮಸೋ ಮಾ ಜ್ಯೋತಿರ್ಗಮಯ" ಎಂಬಂತೆ, ಮಕ್ಕಳನ್ನು ಅಜ್ಞಾನದಿಂದ ಜ್ಞಾನದೆಡೆಗೆ ಕೊಂಡೊಯ್ಯುವ ಸಾಧನವಾಗಬೇಕು ತಂದೆತಾಯಿಗಳು. ಹಾಗಾದಾಗ ಮಾತ್ರ ಮಕ್ಕಳನ್ನು ಹೆತ್ತದ್ದು ಸಾರ್ಥಕ. ಆ ರೀತಿಯ ಸುಸಂಸ್ಕಾರವಂತ ಮಕ್ಕಳು ದೇಶದ ಸುಪ್ರಜೆಗಳಾಗಿ ನಮ್ಮ ಭಾರತಮಾತೆಯು ರಾಮರಾಜ್ಯ ಕಾಣುವಂತಾಗುತ್ತದೆ.

—ಶ್ರೀಮತಿ ಪಾರ್ವತಿ ಶ್ರೀಕಂಠ ಶಾಸ್ತ್ರಿ

**ನೀವು ಹೇಗೆ ಬಾಳಬೇಕೆಂದರೆ, ನಿಮ್ಮ ಮಕ್ಕಳು ಮುಂದೆ ನ್ಯಾಯಬದ್ಧತೆ ಮತ್ತು ನೀತಿ ಬದ್ಧತೆಯ ಬಗ್ಗೆ ಆಲೋಚಿಸುವಾಗ ನಿಮ್ಮನ್ನು ನೆನಸಿಕೊಳ್ಳುವಂತಾಗಬೇಕು.**

—ಹೆಚ್. ಜಾಕ್ಸನ್ ಬ್ರೌನ್

ಮಕ್ಕಳು ದೇವರ ಸ್ವರೂಪ, ಮಕ್ಕಳ ಜೀವನ ರೂಪಿಸುವುದು ತಂದೆತಾಯಿಗಳ ಪ್ರಥಮ ಕರ್ತವ್ಯವೇ ಆಗಿದೆ. ಮಕ್ಕಳ ಮನಸ್ಸು ಆಗತಾನೇ ಅರಳುತ್ತಿರುವ ಒಂದು ಹೂವಿನ ಹಾಗೆ. ಅದನ್ನು ಜೋಪಾನವಾಗಿ ಕಾಪಾಡಬೇಕು. ಈ ಹೂವನ್ನು (ಮಕ್ಕಳನ್ನು) ಶಾಲೆಗೆ ಸೇರಿಸಿ ತಮ್ಮ ಜವಾಬ್ದಾರಿ ಮುಗಿಯಿತೆಂದು ಕೆಲವು ತಂದೆ ತಾಯಿಗಳು ತಿಳಿಯುತ್ತಾರೆ. ಆದರೆ ಅವರ ಕರ್ತವ್ಯ ಆಗತಾನೇ ಆರಂಭವಾಗುತ್ತದೆ.

ಕೆಲವೊಂದು ಮನೆಯಲ್ಲಿ ಮಕ್ಕಳನ್ನು ಶಾಲೆಗೆ ಸೇರಿಸಲು ತಾಯಿಯೇ ಪರಿಶ್ರಮ ಪಡುತ್ತಾಳೆ. ಆದರೆ ಇಲ್ಲಿ ತಂದೆಯ ಪಾತ್ರ ಕಂಡುಬರುವುದಿಲ್ಲ. ಕೇವಲ ದುಡಿಯುವುದೇ ತಂದೆಯ ಕೆಲಸವಾಗುತ್ತದೆ. ಹೆಂಡತಿ, ಮಕ್ಕಳನ್ನು ಸಾಕುವುದಷ್ಟೇ ಅವನ ಕೆಲಸವಾಗಿರುತ್ತದೆ. ಆದರೆ ಮಕ್ಕಳನ್ನು ತಿಳಿಯಲು, ಅವರ ಮನಸ್ಸನ್ನು ಅರಿಯಲು ಇಂದು ಯಾರ ಬಳಿಯಲ್ಲೂ ಸಮಯವಿಲ್ಲ.

ಮಗು ಎಲ್ಲರ ಪ್ರೀತಿ, ಸ್ನೇಹವನ್ನು ಬಯಸುತ್ತದೆ. ಇಲ್ಲಿ ತಾಯಿ ಹೆಚ್ಚಾಗಿ ಗಮನ ನೀಡುವುದರಿಂದ ಮಕ್ಕಳು ಹೆಚ್ಚಾಗಿ ತಾಯಿಯ ಮೇಲೆ ಅತಿಯಾದ ಪ್ರೀತಿ, ನಂಬಿಕೆ, ವಿಶ್ವಾಸ, ಸಲಿಗೆ, ಬೆಳೆಸಿಕೊಂಡಿರುತ್ತವೆ. ಇಂದಿನ ದಿನಗಳಲ್ಲಿ ಮಕ್ಕಳ ಮನಸ್ಸಿನ ಮೇಲೆ ಅದ್ಭುತ ಪರಿಣಾಮ ಬೀರುವಂಥ ದೂರದರ್ಶನದ ಹಲವಾರು ಚಾನೆಲ್‌ಗಳು ಇವೆ. ಇವುಗಳಿಂದ ಮಕ್ಕಳ ಮನಸ್ಸಿನ ಮುಗ್ಧತೆ ನಷ್ಟವಾಗುತ್ತಿದೆ, ಅವರ ವಯಸ್ಸಿಗೆ ಸಲ್ಲದ ವಿಷಯಗಳು ಅವರ ಮನಸ್ಸನ್ನು ತುಂಬುತ್ತಿವೆ. ಶಾಲೆಗಳಲ್ಲಿ ದೊರೆಯುತ್ತಿರುವ ಶಿಕ್ಷಣವಾಗಲಿ ಅಥವಾ ಶಿಕ್ಷಕರ ಪಾಠಕ್ರಮವಾಗಲಿ ಮಕ್ಕಳ ಮನಸ್ಸಿನ ಮುಗ್ಧತೆಯನ್ನು ಕಾಪಾಡಲು ಸಹಾಯಕಾರಿಯಾಗಿಲ್ಲ. ಮಕ್ಕಳ ಮುಗ್ಧತೆ ಕಾಪಾಡುವುದು ತಂದೆತಾಯಿಗಳ ಮತ್ತು ಪೋಷಕರ ಪ್ರಮುಖ ಕರ್ತವ್ಯವಾಗಿದೆ.

—ಸುಷ್ಮಾ, ಭದ್ರಾವತಿ